ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp.86 - 94
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಡಾ.ಬಾಬೂ ಜಗಜೀವನ್‌ರಾಮ್ ದಲಿತರಿಗೆ ನೀಡಿದ ಕೊಡುಗೆಗಳು

**ಡಾ. ಶಂಕರ ಆರ್ ಗೇರುಮಾಳಂ**
ಮಾನವಶಾಸ್ತ್ರ ಸಂಶೋಧಕ

**Abstract:**
*ಬಾಬೂ ಜಗಜೀವನ್‌ರಾಮ್‌ರವರು ಸಮಾಜದಲ್ಲಿನ ಜಾತಿ ಆಚರಣೆ ಮತ್ತು ಶೋಷಣೆ ವಿರುದ್ಧ ಪ್ರತಿಭಟನೆಗಳನ್ನು ನಡೆಸಿದರು. ಬನಾರಸ್ ವಿಶ್ವವಿದ್ಯಾಲಯದ ಘಟನೆಯ ನಂತರ ಸಮಾಜದಲ್ಲಿ ಹೆಚ್ಚು ಜಾಗೃತಿ ಮೂಡಿಸುವ ಸಲುವಾಗಿ, ತಮಗೆ ದೊರೆತಿದ್ದ ಸರ್ಕಾರಿ ನೌಕರಿಯನ್ನು ತೊರೆದು, 'ರಾಜಕೀಯ ಅಧಿಕಾರ ದೊರೆತಾಗ ಮಾತ್ರ ಸಮಾಜದ ಸಮಾನತೆಗೆ ದುಡಿಯಬಹುದು' ಎಂಬುದು ಮನವರಿಕೆಯಾಯಿತು. ಒಮ್ಮೆ ಕಾಂಗ್ರೆಸ್ಸನ್ನು ಟೀಕಿಸಿದರೆ, ಮತ್ತೊಮ್ಮೆ ಹರಿಜನ ಸೇವಾ ಸಂಘವನ್ನು ಟೀಕಿಸಿದರು. ಅಂದು ಕಾಂಗ್ರೆಸ್ ರಾಷ್ಟ್ರದ ಪ್ರಮುಖ ರಾಜಕೀಯ ಪಕ್ಷವಾಗಿದ್ದಿತು. ಇದರ ಮೂಲಕವೇ ರಾಜಕೀಯ ಅಧಿಕಾರ ಪಡೆದು ಶೋಷಿತರು ಮತ್ತು ದಲಿತರ ಏಳಿಗೆಗೆ ದುಡಿಯಲು ಪಣತೊಟ್ಟರು. ಅದರಂತೆಯೇ ಕೃಷಿ ಕಾರ್ಮಿಕ ಸಂಘ ಸ್ಥಾಪಿಸಿ, ಜನರಮನೆ–ಮನದ ಕಣ್ಮಣಿಯಾಗಿದ್ದ ಬಾಬೂಜಿಯವರು 1946ರ ಮಧ್ಯಂತರ ಸರ್ಕಾರದಲ್ಲಿ ಕೇಂದ್ರ ಕಾರ್ಮಿಕ ಮಂತ್ರಿಯಾದರು.*

**Keywords:** *ಡಾ.ಬಾಬೂ ಜಗಜೀವನ್‌ರಾಮ್, ದಲಿತರು, ಕೃಷಿ ಕಾರ್ಮಿಕ ಸಂಘ, ಕಾಂಗ್ರೆಸ್, ಭೂ ಸುಧಾರಣೆ.*

**ಪೀಠಿಕೆ**

ಸ್ವಾತಂತ್ರ ಹೋರಾಟಗಾರ, ಸಮಾಜ ಸುಧಾರಕ, ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬೂ ಜಗಜೀವನ ರಾಮ್‌ರವರು ಏಪ್ರಿಲ್ 5, 1908 ರಂದು ಬಿಹಾರ ರಾಜ್ಯದ ಆರಾ ಜಿಲ್ಲೆಯ ಚಾಂದ್ವಾ ಎಂಬ ಗ್ರಾಮದಲ್ಲಿ ಶೋಭಿರಾಮ್ ಮತ್ತು ವಾಸಂತಿ ದೇವಿಯರ ಮಗನಾಗಿ ಜನಿಸಿದರು. ಒಟ್ಟು ಏಳು ಮಕ್ಕಳಲ್ಲಿ ನಾಲ್ಕು ಜನ ಹೆಣ್ಣು ಮಕ್ಕಳು, ಮೂವರು ಗಂಡು ಮಕ್ಕಳು. ಮೂರನೇ ಮಗನೇ ಜಗಜೀವನರಾಮ್. ಜಗಜೀವನ್‌ರಾಮರ ತಂದೆ ಮತ್ತು ತಾಯಿಗೆ ಕಿತ್ತುತಿನ್ನುವ ಬಡತನವಿದ್ದರೂ ಕೂಡ ಮಕ್ಕಳನ್ನು ಓದಿಸಬೇಕೆಂಬದು ಮಹಾದಾಸೆ. ಅದರಲ್ಲೂ ಬಾಲ್ಯದಲ್ಲಿಯೇ ಚುರುಕಾಗಿದ್ದ ಜಗಜೀವನರಾಮನನ್ನು ಓದಿಸಬೇಕೆಂಬ ಹೆಬ್ಬಯಕೆ ತಂದೆಯದಾಗಿತ್ತು. ಅದರಂತೆ ಜಗಜೀವನರಾಮ್‌ಗೆ ಆರು ವರ್ಷ ತುಂಬಿದಾಗ ಅವರ ತಂದೆ ಶಾಲೆಗೆ ದಾಖಲಿಸಿದರು. ಗ್ರಾಮದ ಹಿರಿಯ ಬ್ರಾಹ್ಮಣರೂ ಹಾಗೂ ಎಲ್ಲರನ್ನೂ ಸಮನಾಗಿ ಕಾಣುತ್ತಿದ್ದ ಪಂಡಿತ ಕಪಿಲ ಮುನಿ ತಿವಾರಿಯವರು ಗುರುಗಳಾಗಿದ್ದರು.

**ಕಾರ್ಮಿಕ ಮಂತ್ರಿಯಾಗಿ ಜಗಜೀವನ ರಾಮ್ (1946–1952)**

ಜಗಜೀವನ್‌ರಾಮ್ 1937ರ ಸರ್ಕಾರದಲ್ಲಿ ಸಂಸದೀಯ ಕಾರ್ಯದರ್ಶಿಯಾಗಿದ್ದ ಸಂದರ್ಭದಲ್ಲಿ ಕೈಗಾರಿಕಾ, ಶಿಕ್ಷಣ, ಗ್ರಾಮೀಣಾಭಿವೃದ್ಧಿ ಇತರೆ

***Please cite this article as:*** ಶಂಕರ ಆರ್ ಗೇರುಮಾಳಂ. (2024). ಡಾ.ಬಾಬೂ ಜಗಜೀವನ ರಾಮ್ ದಲಿತರಿಗೆ ನೀಡಿದ ಕೊಡುಗೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(6), 86–94.

ಸಚಿವಾಲಯಕ್ಕೂ ಕಾರ್ಯದರ್ಶಿಯಾಗಿದ್ದು, ರಾಷ್ಟ್ರದಾದ್ಯಂತ ಸುತ್ತಾಡಿ ಕೈಗಾರಿಕಾ ಕಾರ್ಮಿಕರ ಸಮಸ್ಯೆಗಳನ್ನು ಅರಿತಿದ್ದರು. ಜಗಜೀವನರಾಮ್‌ರವರು ಕೃಷಿ ಕಾರ್ಮಿಕ ಸಂಘದ ರ್‍ಯಾಲಿಯನ್ನು ನಡೆಸಿ, ಕಡಿಮೆ ವೇತನಕ್ಕೆ ದುಡಿಸಿಕೊಳ್ಳುವ ಜಮೀನ್ದಾರರ ವಿರುದ್ಧ ಗುಡುಗಿದ್ದರು. ಸ್ವಾತಂತ್ರ್ಯದ ಪೂರ್ವದಲ್ಲಿಯೇ ಕಾರ್ಮಿಕ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಇಲ್ಲಿನ ಶೋಷಣೆಯನ್ನು ಕೊನೆಗಾಣಿಸಬೇಕಾದರೆ ಆರ್ಥಿಕ ಸಬಲತೆಯೇ ಬಲವೆಂದು ಪರಿಗಣಿಸಿದ್ದ ಜಗಜೀವನರಾಮ್ ಪ್ರಥಮವಾಗಿ ಕನಿಷ್ಠ ಕೂಲಿ ಕಾಯಿದೆಯನ್ನು ಜಾರಿಗೆತಂದರು. ಇದು ಹಳ್ಳಿಗಾಡಿನಲ್ಲಿ ಕಡಿಮೆ ಕೂಲಿಗೆ ದುಡಿಸಿಕೊಳ್ಳುತ್ತಿದ್ದ ಭೂಮಾಲೀಕರು ಹಾಗೂ ಗಿರಣಿ ಮಾಲೀಕರ ವಿರುದ್ಧವಾಗಿತ್ತು. ಕಡಿಮೆ ಕೂಲಿಗೆ ದುಡಿಯುತ್ತಿದ್ದ ಬಹುಪಾಲು ಮಂದಿ ದಲಿತರೇ ಆಗಿದ್ದರು. ನಂತರ ಕಾರ್ಖಾನೆಗಳಲ್ಲಿ ಸೃಷ್ಟಿಯಾಗುತ್ತಿದ್ದ ವಿವಾದಗಳನ್ನು ನಿವಾರಿಸಲು ಜಗಜೀವನರಾಂ ಅವರು ಕೈಗಾರಿಕಾ ವಿವಾದ ಮಸೂದೆಯನ್ನು ಜಾರಿಗೊಳಿಸಿದರು. ಈ ಕಾಯಿದೆಯು 23ನೇ ಏಪ್ರಿಲ್ 1946ರಂದು ಜಾರಿಗೆ ಬಂದಿತು. ಈ ಕಾಯಿದೆಯು ಕೈಗಾರಿಕಾ ಉದ್ಯೋಗಿಗಳಲ್ಲಿ ಭರವಸೆಯ ಬೆಳಕಾಗಿತ್ತು. ಯಾವುದೇ ಕಾರಣ ನೀಡದೆ ಯಾವುದೇ ಕಾರ್ಮಿಕರನ್ನು ತೆಗೆಯುವಂತಿರಲಿಲ್ಲ. ಹಾಗೇನಾದರೂ ತೆಗೆದ ಪಕ್ಷದಲ್ಲಿ ಕಾರ್ಮಿಕ ದಾವೆ ಹೂಡಿದರೆ ಕಂಪನಿಯು ದಾವೆಯ ಇತ್ಯರ್ಥವಾಗುವವರೆಗೆ ಆತನಿಗೆ ಅರ್ಧ ಸಂಬಳ ನೀಡಬೇಕು ಎಂಬುದನ್ನು ಉಲ್ಲೇಖಿಸಿದೆ.

**ಮಧ್ಯಂತರ ಸರ್ಕಾರದಲ್ಲಿ ಜಗಜೀವನ್‌ರಾಮ್ ನೀಡಿದ ಕೊಡುಗೆಗಳು**

ಬ್ರಿಟನ್ನಿನಲ್ಲಿ ಕಾರ್ಮಿಕ ಪಕ್ಷದ ಸರ್ಕಾರವು ಕ್ಯಾಬಿನೆಟ್ ಮಿಷನ್‌ನ ಯೋಜನೆಯನ್ನು ರೂಪಿಸಿತ್ತು. ಇದನ್ನು ಭಾರತದ ಅಖಂಡತೆಯನ್ನು ಆಧಾರವಾಗಿಟ್ಟುಕೊಂಡು ಮಾಡಲಾಗಿತ್ತು ಎಂಬುದು ಗಮನಾರ್ಹವಾದ ವಿಷಯ. ಜೂನ್ 16, 1946ರಂದು ಭಾರತದ ಗವರ್ನರ್ ಜನರಲ್ ಅದ ಲಾರ್ಡ್ ವೇವಲರು ಮಧ್ಯಂತರ ಸರ್ಕಾರ ಘೋಷಣೆ ಮಾಡಿದರು. ವೇವಲರ ಆಹ್ವಾನದ ಮೇರೆಗೆ ದೆಹಲಿಗೆ ಆಗಮಿಸಿದ ಜಗಜೀವನರಾಮ್‌ರವರು ದಲಿತರಿಗೆ ಮಧ್ಯಂತರ ಸರ್ಕಾರದಲ್ಲಿ ಸಾಕಷ್ಟು ಪ್ರಾತಿನಿಧ್ಯ ಇಲ್ಲದೆ ಇರುವುದರಿಂದ ಕುಪಿತರಾಗಿ ವೇವಲರಿಗೆ ಒಂದು ತಂತಿ ಕಳುಹಿಸಿದರು."ನಾನು ಯಾವೊಬ್ಬ ರಾಷ್ಟ್ರೀಯ ಮುಸಲ್ಮಾನರನ್ನು ತೆಗೆದುಕೊಳ್ಳದೇ ಇರುವುದನ್ನು ಅನುಚಿತವೆಂದು ಭಾವಿಸುತ್ತೇನೆ. ಅಲ್ಪಸಂಖ್ಯಾತರ ಪ್ರಾತಿನಿಧಿತ್ವವನ್ನು ಜಿನ್ನಾರವರ ಕೃಪೆಗೆ ಬಿಟ್ಟುಬಿಡುವುದು ಪ್ರಜಾತಂತ್ರ ಸಿದ್ಧಾಂತಕ್ಕೆ ವಿರುದ್ಧವಾಗಿದೆ. ಅನುಸೂಚಿತ ಜಾತಿಗಳ ಪ್ರಾತಿನಿಧ್ಯ ಸಾಕಷ್ಟಿಲ್ಲ, ಆದಕಾರಣ ಸದ್ಯದ ಪರಿಸ್ಥಿತಿಯಲ್ಲಿ ಮಧ್ಯಂತರ ಸರ್ಕಾರದ ಸದಸ್ಯತ್ವವನ್ನು ನಾನು ಸ್ವೀಕರಿಸುವುದಿಲ್ಲ"ಎಂದು ತಿಳಿಸಿದರು. ಇದು ದಲಿತರು ರಾಜಕೀಯವಾಗಿ ಸಮಾನ ಅವಕಾಶಗಳನ್ನು ಪಡೆಯಬೇಕೆಂಬ ನಿಲುವಿನಿಂದಾಗಿ ವಿರೋಧ ವ್ಯಕ್ತಪಡಿಸಿದರು.

ಇದಾದ ನಂತರ ಮುಸ್ಲಿಂಲೀಗ್ ಪಾಕಿಸ್ತಾನದ ಬೇಡಿಕೆಯನ್ನು ದೃಢವಾಗಿ ಮಂಡಿಸಿದರು ಮತ್ತು ಭಾರತದ ಸಂವಿಧಾನ ರಚನೆ ಪರಿಷತ್ತಿನಿಂದ ದೂರ ಉಳಿದರು. ಈ ಸಂದರ್ಭದಲ್ಲಿ ಅಂಬೇಡ್ಕರ್‌ರವರು 'ಸಂವಿಧಾನವನ್ನು' ಸಂವಿಧಾನ ಪರಿಷತ್‌ನಿಂದ ರಚನೆಯಾಗುವುದನ್ನು ವಿರೋಧಿಸಿದರು. ಜಗಜೀವನ ರಾಮ್‌ರವರೂ ಸಹ ವಿರೋಧಿಸಿ, ವಿರೋಧದ ಜ್ಞಾಪನವನ್ನು ಹೊತ್ತು ಲಂಡನ್ನಿಗೆ ಹೋದರು. ಈ ಮೊದಲೇ ದಲಿತರ ಪ್ರಾತಿನಿಧಿತ್ವ ಕಡಿಮೆ ಎಂದು ಕೊರಗಿದ್ದ ಜಗಜೀವನ ರಾಮ್, ಡಾ.ಬಿ.ಆರ್. ಅಂಬೇಡ್ಕರ್‌ರವರನ್ನು ಸ್ವತಂತ್ರ ಭಾರತದ ಮೊದಲ ಮಂತ್ರಿಮಂಡಲಕ್ಕೆ ಸೇರಿಸುವಲ್ಲಿ ಯಶಸ್ವಿಯಾದರು.

ಜೂನ್ 15, 1946ರಂದು ಅಂತರಾಷ್ಟ್ರೀಯ ಕಾರ್ಮಿಕರ ಸಂಘ (ILO)ಗೆ ಭಾರತದ ಪ್ರತಿನಿಧಿಯ

ರೂಪದಲ್ಲಿ ಹೋದರು. ಅಲ್ಲಿ ಭಾಷಣವನ್ನು ಮಾಡಿ, ಭಾರತದ ಕಾರ್ಮಿಕರ ಸ್ಥಿತಿಗಳ ಬಗ್ಗೆ ವಿವರಿಸಿ, ಇತರೆ ಸಚಿವಾಲಯಗಳ ಕಾರ್ಮಿಕರ ಪರಿಸ್ಥಿತಿಗಳನ್ನು ಅರಿತು 1948ರಲ್ಲಿ 'ಜೀವವಿಮಾ ಯೋಜನೆ' ಜಾರಿಗೆತಂದರು. ಕಾರ್ಮಿಕರಿಗೆ ಅನಾರೋಗ್ಯದ ದಿನಗಳಲ್ಲಿ ವಿಮೆ ಹಣ ಸಿಗುವಂತಾಯಿತು. ಕಾರ್ಮಿಕ ಕಲ್ಯಾಣದ ವಿಷಯದಲ್ಲಿ ಇದು ಅತ್ಯಂತ ಯಶಸ್ವಿಯಾದ ಕಾಯಿದೆಯಾಗಿದೆ. ಈ ಕಾಯಿದೆಯೂ ಕೂಡ ಪ್ರಸ್ತುತದಲ್ಲಿ ಚಾಲ್ತಿಯಲ್ಲಿದೆ.

ಸಂವಿಧಾನದ 335ನೇ ವಿಧಿಯು ಜಗಜೀವನರಾಮ್ ಮತ್ತು ಹರಿಜನ ಸದಸ್ಯರ ಅಭಿಪ್ರಾಯದಂತೆ ಸೇರ್ಪಡೆಗೊಂಡಿತು. ಸಂವಿಧಾನ ರಚನಾ ಸಂದರ್ಭದಲ್ಲಿ ದಲಿತರನ್ನು ಅಲ್ಪಸಂಖ್ಯಾತರೆಂದೇ ವರ್ಗೀಕರಣ ಮಾಡಿದ್ದರು. ಇದರ ಅನ್ವಯ ಉಪಸಮಿತಿಯು ವಿಧಾನಸಭೆಗೆ ಮಾತ್ರ ಮೀಸಲಾತಿಯನ್ನು ಕಲ್ಪಿಸಿತು. ಕೇಂದ್ರೀಯ ಮತ್ತು ಪ್ರಾದೇಶಿಕವಾಗಿ ಮೀಸಲಾತಿ ಇಲ್ಲವಾಗಿತ್ತು. ಅಲ್ಲದೆ ಸರ್ಕಾರಿ ಸೇವೆಗಳಲ್ಲಿ ಸೇರ್ಪಡೆಗೊಳ್ಳುವುದು ಕಷ್ಟ ಸಾಧ್ಯವಾಗಿತ್ತು. ಇಂತಹ ಸಂದರ್ಭದಲ್ಲಿ ಜಗಜೀವನರಾಮ್‌ರವರು ಸರ್ಕಾರಿ ಸೇವೆಯಲ್ಲಿ ದಲಿತರಿಗೆ ಮೀಸಲಾತಿ ದೊರಕಿಸಿ ಕೊಡುವುದರಲ್ಲಿ ಯಶಸ್ವಿಯಾದರು. ಜಗಜೀವನರಾಮ್ ಎಲ್ಲಾ ಸದಸ್ಯರಿಗೂ ಮನದಟ್ಟು ಮಾಡಿ, ಸರ್ಕಾರಿ ಸೇವೆಯಲ್ಲಿ ಹರಿಜನರಿಗೆ ಮೀಸಲಾತಿ ವ್ಯವಸ್ಥೆಯಾಗದಿದ್ದರೆ, ದಲಿತ ವರ್ಗದ ಸದಸ್ಯರು ಸಂವಿಧಾನ ಸಭೆಯಿಂದ ಹೊರನಡೆಯುವುದಾಗಿ ತಿಳಿಸಿದರು. ಇದರ ಫಲವಾಗಿಯೇ ಉದ್ಯೋಗದಲ್ಲಿ ಮೀಸಲಾತಿ ದೊರಕಿತು.

**ಸಾರಿಗೆ ಮತ್ತು ಸಂಪರ್ಕ ಸಚಿವರಾಗಿ ಜಗಜೀವನ್‌ರಾಮ್ ದಲಿತರಿಗೆ ನೀಡಿದ ಕೊಡುಗೆಗಳು**

ಭಾರತ 1947ರಲ್ಲಿ ಸ್ವತಂತ್ರವಾಯಿತು. ಈ ಸಮಯದಲ್ಲಿ ಮಧ್ಯಂತರ ಸರ್ಕಾರ ಅಧಿಕಾರ ನಡೆಸಿತ್ತು. ಮಧ್ಯಂತರ ಸರ್ಕಾರವು 1951–52ರಲ್ಲಿ ಸಾರ್ವತ್ರಿಕ ಚುನಾವಣೆ ನಡೆಸಲು ತೀರ್ಮಾನಿಸಿತು. ಈ ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತ ಗಳಿಸಿತು. ಈ ಸಂದರ್ಭದಲ್ಲಿ ಪ್ರಧಾನ ಮಂತ್ರಿಯಾಗಿ ಜವಾಹರಲಾಲ್ ನೆಹರೂರವರನ್ನು ಆಯ್ಕೆ ಮಾಡಲಾಯಿತು. ಇದೇ ಸಮಯದಲ್ಲಿ ಜಗಜೀವನರಾಮ್ ಅವರನ್ನು ಸಾರಿಗೆ ಮತ್ತು ಸಂಪರ್ಕ ಸಚಿವರನ್ನಾಗಿ ಆರಿಸಲಾಯಿತು. ಇದರ ಪ್ರಮಾಣವಚನವು ಮೇ 3, 1952ರಂದು ರಾಷ್ಟ್ರಪತಿ ಭವನದ ದರ್ಬಾರ್ ಹಾಲ್‌ನಲ್ಲಿ ನಡೆಯಿತು.

ಭಾರತದಲ್ಲಿ ಸಾರಿಗೆ–ಸಂಪರ್ಕ ವ್ಯವಸ್ಥೆಯು ಬಹಳ ಹಿಂದುಳಿದಿತ್ತು. ಇದನ್ನು ವೈಜ್ಞಾನಿಕ ತಳಹದಿಯ ಮೇಲೆ ಸುಧಾರಿಸಬೇಕಾಗಿತ್ತು. ಜಗಜೀವನರಾಮ್‌ರವರು ಅಧಿಕಾರ ವಹಿಸಿಕೊಂಡ ತಕ್ಷಣ ಮೊದಲು ಮಾಡಿದ ಕಾರ್ಯವೆಂದರೆ ಪ್ರತಿ ಎರಡು ಸಾವಿರ ಜನಸಂಖ್ಯೆಗೆ ಅನುಗುಣವಾಗಿ ಒಂದು ಅಂಚೆ ಕಛೇರಿಗಳನ್ನು ಸ್ಥಾಪಿಸಲು ಅನುಮೋದನೆ ನೀಡಿದರು. ಜೊತೆಗೆ ಚಳಿ ಪ್ರದೇಶಗಳಲ್ಲಿ ಸೇವೆ ಸಲ್ಲಿಸಲು ಅಂಚೆ ಇಲಾಖೆ ನೌಕರರಿಗೆ ಸೈಕಲ್‌ಗಳು ಮತ್ತು ಉಣ್ಣೆ ಬಟ್ಟೆಯ ಸಮವಸ್ತ್ರಗಳನ್ನು ವಿತರಿಸಿದರು. ಅಂಚೆ ಇಲಾಖೆಯ ನಂತರ ಜಗಜೀವನರಾಮ್‌ರವರು ವಿಮಾನಯಾನದ ಸುಧಾರಣೆಗೆ ಆದ್ಯತೆ ನೀಡಿದರು. ಇದಕ್ಕಾಗಿ ಇವರು ಹೊಸ ವಿಮಾನಗಳನ್ನು ಖರೀದಿಸಿದರು. ಹಿಂದೆ ಪೈಲಟ್ ಹುದ್ದೆಗಳು ಮೇಲ್ವರ್ಗದವರ ಸ್ವತ್ತಾಗಿತ್ತು. ಜಗಜೀವನರಾಮ್ ಅವರು ಸಮಾಜದ ಎಲ್ಲಾ ವರ್ಗಗಳಿಗೂ ಸರ್ಕಾರಿ ಹುದ್ದೆಗಳಲ್ಲಿ ಅವಕಾಶವಿರಬೇಕೆಂದು ಆ ಹುದ್ದೆಯನ್ನು ಮುಕ್ತಗೊಳಿಸಿದರು. ಈ ನಿರ್ಧಾರದಿಂದ ವಾಯು ಸಾರಿಗೆ ಇಲಾಖೆಯಲ್ಲಿ ಅಲ್ಪಸಂಖ್ಯಾತರು ಮತ್ತು ಪರಿಶಿಷ್ಟರಿಗೆ ಪ್ರಾತಿನಿಧ್ಯ ದೊರೆಯುವಂತಾಯಿತು. ಇದಲ್ಲದೆ ವಿಮಾನಯಾನವು ಕೇವಲ ಶ್ರೀಮಂತರಿಗೆ ಮಾತ್ರ ಲಭ್ಯವಾಗಬಾರದು, ಶ್ರೀಸಾಮಾನ್ಯನೂ ಅದರಲ್ಲಿ ಪ್ರಯಾಣ ಕೈಗೊಳ್ಳಬೇಕೆಂಬುದು ಜಗಜೀವನರಾಮ್ ಅವರ ಆಶಯವಾಗಿತ್ತು.

ಜಗಜೀವನರಾಮ್ ಅವರ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿಮಾನಯಾನವನ್ನು ಅಭಿವೃದ್ಧಿ ಪಡಿಸಲಾಯಿತು. ದೇಶಿಯತೆಗೆ ಆದ್ಯತೆ ನೀಡಿ, 500ಜನ ಯುವಕರಿಗೆ ವಿಮಾನಯಾನ ತರಬೇತಿ ನೀಡಲಾಯಿತು. ತರಬೇತಿ ಪಡೆದವರಲ್ಲಿ ಪ್ರತಿಶತ ಐವತ್ತು ದಲಿತರು ಮತ್ತು ಶೋಷಿತ ವರ್ಗದವರಿಗೆ ಆದ್ಯತೆ ನೀಡಲಾಗಿತ್ತು. ಜಗಜೀವನರಾಮ್ ಅವರ ದೂರದೃಷ್ಟಿಯ ಫಲವಾಗಿ ರಾಷ್ಟ್ರ ಮತ್ತು ದಲಿತರಿಗೆ ಏಕಕಾಲದಲ್ಲಿ ನ್ಯಾಯ ಸಮ್ಮತವಾದ ಕಾರ್ಯಗಳನ್ನು ನೀಡಿದರು. ನಾಗರಿಕ ವಿಮಾನಯಾನ ಪೈಲೆಟ್ ತರಬೇತಿಗೆ ಶಿಫಾರಸ್ಸು ಅನುಷ್ಠಾನಗೊಳಿಸಿ, ಫ್ಲೇಯಿಂಗ್ ಕ್ಲಬ್‌ಗಳಿಗೆ ಆರ್ಥಿಕ ನೆರವು ನೀಡಿ ಯುವಕರನ್ನು ಆಕರ್ಷಿಸಿದರು. ಪೈಲೆಟ್ ತರಬೇತಿಗೆ ಬರುವ ಪರಿಶಿಷ್ಟರಿಗೆ ಶುಲ್ಕದಲ್ಲಿ ರಿಯಾಯಿತಿ ನೀಡಿದರು. ಇವರ ಈ ಸೇವೆ ದಲಿತರ ಶ್ರೇಯೋಭಿವೃದ್ಧಿಗೆ ನೀಡಿದ ಮಹತ್ತರ ಕೊಡುಗೆಯಾಗಿದೆ.

1960ರಲ್ಲಿ ರಾಷ್ಟ್ರದಲ್ಲಿ 76,839 ಅಂಚೆ ಕಛೇರಿಗಳಿದ್ದವು. ಇವುಗಳಲ್ಲಿ 69,513 ಅಂಚೆ ಕಛೇರಿಗಳು ಹಿಂದುಳಿದ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ನಿರ್ಮಾಣವಾಗಿ ಸೇವೆ ಸಲ್ಲಿಸಿದವು. ಗ್ರಾಮೀಣ ಭಾಗದ ಜನರಿಗೆ ಉಳಿತಾಯದ ಅಗತ್ಯವನ್ನು ಜನರಿಗೆ ಮನವರಿಕೆ ಮಾಡಿಕೊಡುವ ಉದ್ದೇಶದಿಂದ ವಿಶೇಷತಃ ಗ್ರಾಮೀಣ ಪ್ರದೇಶದಲ್ಲಿ, ಅಂಚೆ ಕಛೇರಿಗಳಲ್ಲಿ ಉಳಿತಾಯ ಖಾತೆ ಆರಂಭಿಸಲು ಜನರನ್ನು ಆಕರ್ಷಿಸಿದರು. 1961ರಲ್ಲಿ 92ಲಕ್ಷ ಜನ ತಮ್ಮ ಉಳಿತಾಯ ಖಾತೆಯನ್ನು ಅಂಚೆ ಕಛೇರಿಯಲ್ಲಿ ಹೊಂದಿದ್ದರು. ಈ ಖಾತೆಗಳಲ್ಲಿ 431.40ಕೋಟಿ ರೂಪಾಯಿಗಳಿದ್ದವು. ಈ ಯೋಜನೆಯು ಪ್ರಸ್ತುತದಲ್ಲಿಯೂ ಯಶಸ್ವಿಯಾಗಿ ಚಾಲನೆಯಲ್ಲಿದೆ.

ಜಗಜೀವನರಾಮ್ ಅವರು ಅಂಚೆ ಇಲಾಖೆಯ ಸಿಬ್ಬಂದಿಗಳನ್ನು ತರಬೇತಿ ಮತ್ತು ಅಧ್ಯಯನಕ್ಕಾಗಿ ವಿದೇಶಕ್ಕೆ ತೆರಳಲು ಅನುಮತಿ ನೀಡಿದರು. ಸಿಬ್ಬಂದಿಯ ಕಲ್ಯಾಣಕ್ಕಾಗಿ ಸಹಕಾರಿ ಸಂಘ ಸ್ಥಾಪನೆ, ಕ್ಯಾಂಟೀನ್ ವ್ಯವಸ್ಥೆ ನಿರ್ಮಿಸಲಾಯಿತು. ನಾಲ್ಕನೇ ವರ್ಗದ ನೌಕರರಿಗೆ ರಾತ್ರಿ ಶಾಲೆಗಳನ್ನು ಪ್ರಾರಂಭಿಸಿ ವಿದ್ಯಾರ್ಜನೆ ಮಾಡಿಸಲಾಯಿತು. ಅಂಚೆ ಇಲಾಖೆಯ ನೌಕರರ ಆರೋಗ್ಯದ ಹಿತದೃಷ್ಟಿಯಿಂದ ದವಾಖಾನೆಗಳನ್ನು ಸ್ಥಾಪಿಸಲಾಯಿತು ಹಾಗೂ ಆಹಾರದ ಕೊರತೆಯನ್ನು ನೀಗಿಸಲು ಧಾನ್ಯ ಮಳಿಗೆಗಳನ್ನು ತೆರೆಯಲಾಯಿತು. ಶೋಷಿತ ವರ್ಗದ ಅಂಚೆ ಸಿಬ್ಬಂದಿ ಕುಟುಂಬದವರ ವಿದ್ಯಾರ್ಥಿಗಳಿಗೆ 200 ರೂಪಾಯಿಗಳ ವಿದ್ಯಾರ್ಥಿವೇತನವನ್ನು ನಿಗಧಿಮಾಡಿದರು.

**ರೈಲ್ವೆ ಸಚಿವರಾಗಿ ದಲಿತೋದ್ಧಾರ ಕಾರ್ಯಗಳು**

1956 ನವೆಂಬರ್ 23ರಂದು ಮದ್ರಾಸಿನ ಹತ್ತಿರ ಟುಟಿಕುರಿನ್ ರೈಲು ಅಪಘಾತವಾಗಿ ಅತ್ಯಧಿಕ ಸಾವು–ನೋವು ಸಂಭವಿಸಿತು. ಈ ಸಂದರ್ಭದಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ರೈಲ್ವೆ ಸಚಿವರಾಗಿದ್ದರು. ಇದನ್ನು ನಿಭಾಯಿಸಲಾಗದೆ ರಾಜಿನಾಮೆ ಸಲ್ಲಿಸಿದ್ದರು. ಡಿಸೆಂಬರ್ 7, 1956ರಂದು ರೈಲ್ವೆ ಖಾತೆಯನ್ನು ನಿರ್ವಹಿಸುವಂತೆ ಪಂಡಿತ ಜವಹರಲಾಲ್ ನೆಹರೂರವರು ಜಗಜೀವನರಾಮ್ ಅವರನ್ನು ಒಪ್ಪಿಸಿದರು. ರೈಲ್ವೆ ಇಲಾಖೆ ವಹಿಸಿಕೊಂಡ ತಕ್ಷಣ ರೈಲ್ವೆಯ ಜನರಲ್ ಮ್ಯಾನೆಜರ್‌ಗಳ ಸಭೆ ಕರೆದು ಕುಂದು–ಕೊರತೆಗಳನ್ನು ಆಲಿಸಲಾಯಿತು. ಜೊತೆಗೆ ರೈಲ್ವೆ ಇಲಾಖೆಯ ಕೆಳದರ್ಜೆ ಕರ್ಮಚಾರಿಗಳ ಸಮಸ್ಯೆಗಳ ಕುರಿತಾಗಿ ಆಲಿಸಿದರು. ದೇಶದ ಹಿತ ಮತ್ತು ಅಧಿಕಾರಿಗಳು, ನೌಕರರ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಈ ಇಲಾಖೆಯಲ್ಲಿ ಕಾರ್ಯಾರಂಭ ಮಾಡಿದರು.

**ಎರಡನೇ ಬಾರಿಗೆ ರೈಲ್ವೆ ಸಚಿವರಾಗಿ (1957–62)**

ಇದು ಸ್ವತಂತ್ರ ಭಾರತದ ಎರಡನೇ ಮಹಾ ಚುನಾವಣೆ. ಬಾಬೂಜಿಯವರು ಸ್ಪರ್ಧಿಸುತ್ತಿದ್ದುದು ಸಾಮಾನ್ಯ ಕ್ಷೇತ್ರ. ಈ ಬಾರಿ ಇವರು ಅವಿರೋಧವಾಗಿ ಆಯ್ಕೆಯಾದದ್ದು ಕೂಡ ಒಂದು ಸ್ವಾರಸ್ಯಕರ ಸಂಗತಿಯಾಗಿದೆ. ಒಂದು ಸಾಮಾನ್ಯ

ಕ್ಷೇತ್ರದಲ್ಲಿ ಇವರ ಎದುರು ಸ್ಪರ್ಧಿಸಲು ಅಭ್ಯರ್ಥಿಗಳೇ ಇರಲಿಲ್ಲ. ಆದರೆ ಸವರ್ಣೀಯರು ಛತ್ತೂರಾಮ ಎಂಬ ವ್ಯಕ್ತಿಯನ್ನು ಇವರ ಚುನಾವಣಾ ಕಣದ ಪ್ರತಿಸ್ಪರ್ಧಿಯಾಗಿ ನಿಲ್ಲಿಸಿದರು. ಉಮೇದುವಾರಿಕೆ ಸಲ್ಲಿಸಲಿಲ್ಲ ಎಂದರೆ ಜೀವ ತೆಗೆಯಲಾಗುವುದು ಎಂದು ಬೆದರಿಕೆ ಒಡ್ಡಿದರು. ಆದರೆ ಛತ್ತೂರಾಮ್ ಅವರು ತಮ್ಮ ಉಮೇದುವಾರಿಕೆಯನ್ನು ಹಿಂಪಡೆದು ಜಗಜೀವನರಾಮ್ ಅವರ ಬಳಿಬಂದು ಕ್ಷಮೆಯಾಚಿಸಿ ಆಶೀರ್ವಾದ ಪಡೆದರು.

ಜಗಜೀವನರಾಮ್ ಅವರು ರೈಲ್ವೆ ಮಂತ್ರಿಯಾಗಿ ಈ ಖಾತೆಗೆ ಸಂಬಂಧಿಸಿದ ಹಳೆಯ ನಿಯಮಾವಳಿಗಳನ್ನು ಸಂಪೂರ್ಣವಾಗಿ ಪುನರ್‌ಪರಿಶೀಲನೆ ಮಾಡಿದರು. ಸಾರಿಗೆ ಮತ್ತು ರೈಲ್ವೆ ಇಲಾಖೆಯಲ್ಲಿರುವ ನೌಕರರ ಸೇವಾ ಪರಿಸ್ಥಿತಿಯನ್ನು ಸುಧಾರಿಸಿದರು. ಈ ಇಲಾಖೆಯಲ್ಲಿದ್ದ ಪಟ್ಟಾಭದ್ರ ಹಿತಾಸಕ್ತಿಗಳನ್ನು ಹಾಗೂ ಗೊಡ್ಡು ಸಂಪ್ರದಾಯಗಳನ್ನು ಬುಡಸಮೇತ ಕಿತ್ತುಹಾಕಲು ಮುಂದಾದರು. ಮೊಟ್ಟಮೊದಲು ರೈಲ್ವೆಯಲ್ಲಿರುವ ಅವ್ಯವಸ್ಥೆಗಳನ್ನು ಸರಿಪಡಿಸುವ ಕೆಲಸಕ್ಕೆ ಮುಂದಾದರು. ತಳವರ್ಗದವರ ಯೋಗಕ್ಷೇಮವನ್ನು ಲಕ್ಷ್ಯದಲ್ಲಟ್ಟುಕೊಂಡು ಭವಿಷ್ಯನಿಧಿಯನ್ನು ಜಾರಿಗೆತಂದರು. ಅಲ್ಲದೆ ಇಲಾಖೆಯ ನೌಕರರಿಗೆ ನಿವೃತ್ತಿ ವೇತನದ ವ್ಯವಸ್ಥೆಯನ್ನೂ ಕಲ್ಪಿಸಿದರು. ರೈಲ್ವೆ ಇಲಾಖೆಯಲ್ಲಿ ಕೆಳದರ್ಜೆಯ ನೌಕರರಿಗೆ ಬಡ್ತಿಯ ಅವಕಾಶ ಇರಲಿಲ್ಲ. ಯಾವ ದರ್ಜೆಯಲ್ಲಿರುತ್ತಿದ್ದರೋ, ಅದೇ ದರ್ಜೆಯಲ್ಲಿಯೇ ನಿವೃತ್ತರಾಗುತ್ತಿದ್ದರು. ಅಲ್ಲದೆ ಸವರ್ಣೀಯರು ದಲಿತರಿಗೆ ಯಾವುದೇ ಕೆಲಸದಲ್ಲಿ ಆದ್ಯತೆ ನೀಡುತ್ತಿರಲಿಲ್ಲ. ಈ ರೀತಿಯ ಪಕ್ಷಪಾತವನ್ನು ಬಾಬೂಜಿಯವರು ಮೊದಲು ತೊಡೆದುಹಾಕಿದರು. 'ಸಂವಿಧಾನದಲ್ಲಿಯೇ ಇಲ್ಲದ ಬಡ್ತಿ ಮೀಸಲಾತಿಯನ್ನು ಮೊದಲ ಬಾರಿಗೆ ರೈಲ್ವೆ ಇಲಾಖೆಯಲ್ಲಿ ಜಾರಿಗೆ ತಂದರು, ರೈಲ್ವೆ ಇಲಾಖೆಯ ನಂತರ ಮುಂಬಡ್ತಿ ಮೀಸಲನ್ನು ಕೇಂದ್ರ ಸರಕಾರವು ಎಲ್ಲಾ ವಿಭಾಗಗಳಲ್ಲಿಯೂ ಕಾರ್ಯರೂಪಕ್ಕೆ ತರುವಂತೆ ನೋಡಿಕೊಂಡರು.

ರೈಲ್ವೆ ಜಂಕ್ಷನ್‌ಗಳಲ್ಲಿನ ತಿಂಡಿ–ತಿನಿಸು ಅಂಗಡಿಗಳು ಮೇಲ್ವರ್ಗದವರಿಗೆ ಮಾತ್ರ ಸೀಮಿತವಾಗಿದ್ದವು ಅವುಗಳಲ್ಲಿ ಹರಿಜನರಿಗೆ ಮತ್ತು ಆದಿವಾಸಿಗಳಿಗೆ ಅವಕಾಶ ಕಲ್ಪಿಸಿದರು. ಸವರ್ಣೀಯ ಹಿಂದೂಗಳು ಬ್ರಿಟಿಷರ ಕಾಲದಲ್ಲಿ ರೈಲ್ವೆ ಸಂಚಾರದ ವೇಳೆ ಹಿಂದೂ ಪಾನಿ ಮತ್ತು ಮುಸ್ಲಿಂ ಪಾನಿ ಎಂಬೆರಡು ವಿಭಾಗಗಳನ್ನು ಹುಟ್ಟುಹಾಕಿದ್ದರು. ದೇಶ ಸ್ವತಂತ್ರಗೊಂಡ ನಂತರ ಇದನ್ನು 'ಪಂಡಿತ ಪಾನಿ' ಎಂಬ ಹೆಸರಿನಿಂದ ರೈಲಿನಲ್ಲಿ ನೀರು ಸರಬರಾಜು ಪ್ರಕ್ರಿಯೆ ಚಾಲನೆಯಲ್ಲಿತ್ತು. ಈ ನೀರು ಸರಬರಾಜು ಕಾರ್ಯವನ್ನು ಪಂಡಿತರೇ ನಿರ್ವಹಿಸುತ್ತಿದ್ದರು ಮತ್ತು ಇದರಲ್ಲಿ ಏಕಸ್ವಾಮ್ಯತೆಯನ್ನು ಸಾಧಿಸಿದ್ದರು. ಈ 'ಪಂಡಿತ ಪಾನಿ' ಸರಬರಾಜಿನಿಂದ ದಲಿತರ ಮತ್ತು ಆದಿವಾಸಿಗಳು ಪ್ರಯಾಣದ ವೇಳೆ ನೀರಿನಿಂದ ವಂಚಿತರಾಗುತ್ತಿದ್ದರು. ಈ ಪರಮಾಧಿಕಾರ ಶ್ರೇಷ್ಠತೆಯ ವರ್ತನೆಗೆ ಬೇಸರಗೊಂಡು, ತಕ್ಷಣವೇ ಇದನ್ನು ನಿಲ್ಲಿಸುವಂತೆ ಸೂಚಿಸಿದರು. ನೀರನ್ನು ಹಂಚಲು ವಾಲ್ಮೀಕಿ ಸಮುದಾಯವನ್ನು ನೇಮಿಸಿದರು. ರೈಲ್ವೆ ಇಲಾಖೆಯಲ್ಲಿ ಅಡುಗೆ ಸಹಾಯಕರನ್ನಾಗಿ ದಲಿತರನ್ನು ನೇಮಿಸಲು ಶಿಫಾರಸ್ಸು ಮಾಡಿದರು.

**ರೈಲ್ವೆ ಕಾರ್ಮಿಕರ ಪರವಾಗಿ ಜಗಜೀವನ್‌ರಾಮ್**

ಕಾರ್ಮಿಕರ ಒಂದೇ ಒಂದು ಸಂಘಟನೆಯಿದ್ದರೆ ಕಾರ್ಮಿಕರ ನಡುವೆ ಐಕ್ಯತೆ ಮತ್ತು ಸಾಮರಸ್ಯ ಏಕರೀತಿಯಲ್ಲಿರುತ್ತದೆ. ಎರಡು ಸಂಘಟನೆಗಳಿಗಿಂತ ಒಂದು ಸಂಘಟನೆ ಬಲಯುತವಾದುದು ಎಂಬುದು ಸರಳ ಸಾಮಾನ್ಯ ತಿಳುವಳಿಕೆ. "ಪ್ರತಿಯೊಂದು ರೈಲ್ವೆ ವಿಭಾಗದ ನೌಕರರು ಒಂದು ಸಂಘಟನೆಯನ್ನು ರಚಿಸಿಕೊಳ್ಳಲು ಬಯಸುತ್ತೇನೆ. ಆದರೆ ಅದರ ಆಡಳಿತದಲ್ಲಿ ನಾನು ಕೈ ಹಾಕಲು ಬಯಸುವುದಿಲ್ಲ. ಒಂದು ವೇಳೆ ಅವರಿಗೆ ನನ್ನ ಸೇವೆಯ ಅಗತ್ಯವಿದ್ದರೆ ಸದಾ ನಾನು ಲಭ್ಯವಿರುವೆ ಎಂದು ಹೇಳಿದರು.

ನೌಕರಿಯ ವಿಚಾರದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳು ನೇಮಕಾತಿಯು ನಿಗಧಿತ ಕೋಟಾದ ಪ್ರಮಾಣದಲ್ಲಿ ನಡೆಯುತ್ತಿಲ್ಲ. ಅದನ್ನು ಆದಷ್ಟು ಶೀಘ್ರವಾಗಿ ಪರಿಹರಿಸುತ್ತೇನೆ. ನನಗೂ ನಿಗಧಿತ ಕೋಟಾದಡಿಯಲ್ಲಿ ಅಗತ್ಯ ಸಂಖ್ಯೆಯನ್ನು ತುಂಬುವ ಪ್ರಾಮಾಣಿಕ ಹಂಬಲವಿದೆ. ನನಗಿಂತಲೂ ಮೊದಲು ಲಾಲ್ ಬಹದೂರ್ ಶಾಸ್ತ್ರಿ ಮತ್ತು ಡಾ. ಕುಂಜ್ರು ಅವರಿದ್ದರು. ನಾನು ಹಳೆಯ ಶಿಫಾರಸ್ಸುಗಳನ್ನು ಪರಿಶೀಲಿಸಿ, ರೈಲ್ವೆ ನೌಕರರ ಮಕ್ಕಳಿಗೆ ಶಿಷ್ಯವೇತನ ಮಂಜೂರು ಮಾಡಿರುವೆ. ಪ್ರಸ್ತುತದ ಸಂದರ್ಭದಲ್ಲಿ 930 ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲಾಗಿದೆ ಎಂದರು. ಇದರ ವಾರ್ಷಿಕ ಮೊತ್ತ 2,81,956 ರೂಪಾಯಿಗಳು"ಎಂದು ತಿಳಿಸಿದರು.

ಇಡೀ ನೌಕರಶಾಹಿ ವ್ಯವಸ್ಥೆಯಲ್ಲಿ ಅತ್ಯಂತ ಕೆಳಸ್ಥಿತಿಯಲ್ಲಿರುವುದು ನಾಲ್ಕನೇ ದರ್ಜೆ ನೌಕರರು. ಈ ದರ್ಜೆಯಲ್ಲಿ ಅತಿ ಹೆಚ್ಚಿನ ಮಂದಿ ದಲಿತರು ಮತ್ತು ಶೋಷಿತರು ಮಾತ್ರ. ಇವರು ಉನ್ನತ ಶಿಕ್ಷಣದ ಬಗೆಗೆ ಚಿಂತಿಸಿಯೂ ಇಲ್ಲ. ಆದ್ದರಿಂದ ಇವರಿಗೆ ಹೆಚ್ಚಿನ ಸಂಬಳ ದೊರಕುವುದು ಕಷ್ಟಸಾಧ್ಯವಾಗಿತ್ತು. ಇದನ್ನು ಅಧ್ಯಯನ ನಡೆಸಲು 'ತಾಪ್ಸೆ' ಎಂಬ ಸಮಿತಿಯೊಂದನ್ನು ನೇಮಿಸಿದರು. ಇದರ ಉದ್ದೇಶ ನಾಲ್ಕನೇ ದರ್ಜೆ ನೌಕರರಿಗೆ ಮುಂಬಡ್ತಿ ನೀಡುವುದಾಗಿತ್ತು. ನಾಲ್ಕನೇ ವರ್ಗದ ಜನ ಯಾರೆಂಬುದನ್ನು ಒಮ್ಮೆ ಸಂಸತ್ತಿನಲ್ಲಿ ಹೀಗೆ ಹೇಳುತ್ತಾರೆ; ನಾಲ್ಕನೇ ದರ್ಜೆಯ ನೌಕರ ಎಂದಾಕ್ಷಣ ಜವಾನನನ್ನು ಮುಂದೆ ನಿಲ್ಲಿಸುತ್ತಾರೆ. ರೈಲ್ವೆ, ಅಂಚೆ ಮತ್ತು ತಂತಿ ಇಲಾಖೆ ಮತ್ತು ಕಾರ್ಯಾಚರಣೆ ಸಿಬ್ಬಂದಿ ಅಥವಾ ಕಾರ್ಯನಿರ್ವಾಹಕ ಸಿಬ್ಬಂದಿಯ ಭಾಗವಾಗಿರುತ್ತಾರೆಂದು ಮಂಡಿಸಿದರು.

ಸಂಸತ್ತಿನಲ್ಲಿ ಶ್ರೀ ದಲ್ಜೀತ್‌ಸಿಂಗ್‌ರವರು ಪರಿಶಿಷ್ಟ ಜಾತಿ ಮತ್ತು ಪಂಗಡದವರ ಪ್ರಾತಿನಿಧ್ಯದ ಕುರಿತು ಕೇಳಿರುವ ಪ್ರಶ್ನೆಗೆ ಬಾಬೂಜಿಯವರು "ಬಾಂಬೆ, ಕಲ್ಕತ್ತಾ, ಅಲಹಾಬಾದ್ ಮತ್ತು ಮದ್ರಾಸು ಈ ನಾಲ್ಕು ವಿಭಾಗಗಳಲ್ಲಿ ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಹುದ್ದೆಗಳ ಸಂಖ್ಯೆ 4321. ಪರಿಶಿಷ್ಟ ಪಂಗಡಕ್ಕೆ 2074 ಹುದ್ದೆ. ಆದರೆ ಪರಿಶಿಷ್ಟ ಜಾತಿಯಲ್ಲಿ ಆಯ್ಕೆಯಾದವರು 3454, ಪರಿಶಿಷ್ಟ ಪಂಗಡದಲ್ಲಿ ಕೇವಲ 342. ಈ ಅಂಕಿ ಅಂಶಗಳನ್ನು ಗಣನೆಗೆ ತೆಗೆದುಕೊಂಡು ನೀವು ಮಾತನಾಡುತ್ತಿರುವಿರಿ. ನಾಲ್ಕನೇ ದರ್ಜೆಯ 'ಶೌಚ' ಸಿಬ್ಬಂದಿಯು ಪರಿಶಿಷ್ಟ ಜಾತಿಯಿಂದಲೇ ಬಂದವರಾಗಿರುತ್ತಾರೆ. ಅವರನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸುವುದು ಉಚಿತವಲ್ಲ". ಏಕೆಂದರೆ ಆ ವರ್ಗವೊಂದನ್ನು ಬಿಟ್ಟರೆ ಉಳಿದವರಾರು ಈ ಕೆಲಸ ಮಾಡಲಾರರು ಎಂದು ಉತ್ತರವಿತ್ತರು.

**ಆಹಾರ, ಕೃಷಿ, ಸಹಕಾರ ಮಂತ್ರಿಯಾಗಿ ಜಗಜೀವನ್‌ರಾಮ್ (1967–70)**

ಈ ಸಮಯದಲ್ಲಿ ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ ಸರ್ಕಾರವನ್ನು ರಚಿಸುವುದಿತ್ತು. ಈ ಸಂದರ್ಭದಲ್ಲಿ ಜಗಜೀವನರಾಮ್ ಅವರಿಗೆ ಕೃಷಿ ಮತ್ತು ಆಹಾರ ಖಾತೆ ಪ್ರಾಪ್ತವಾಯಿತು. ಈ ಖಾತೆಯನ್ನು ವಹಿಸಿಕೊಂಡ ಕೂಡಲೇ ಇವರು ಜನತೆಯನ್ನುದ್ದೇಶಿಸಿ 'ನನ್ನ ಕೃಷಿ ಮಂತ್ರಿಯ ಪದವಿಯ ಕಾಲದಲ್ಲಿ ಯಾರೊಬ್ಬರೂ ಹಸಿವಿನಿಂದ ಸಾಯಲು ಬಿಡುವುದಿಲ್ಲ' ಎಂಬ ಘೋಷಣೆಯನ್ನು ಆತ್ಮವಿಶ್ವಾಸದಿಂದ ನುಡಿದರು. ನಂತರ ಎಲ್ಲಾ ಕೃಷಿ ತಜ್ಞರನ್ನು ಕರೆಯಿಸಿ ಒಂದು ಸಮ್ಮೇಳನ ನಡೆಸಿದರು. ಇದರಲ್ಲಿ ಬರಪೀಡಿತ ಪ್ರದೇಶಗಳಲ್ಲಿ ಶೀಘ್ರವಾಗಿ ಬೆಳೆಯುವ ಫಸಲಿಗೆ ಆದ್ಯತೆ ನೀಡಲಾಯಿತು. ಇದರ ಜೊತೆಗೆ ಕೃಷಿ ಬೆಂಬಲ ಬೆಲೆಯ ಬಗೆಗೂ ಚಿಂತಿಸಲಾಯಿತು. ಒಮ್ಮೆ ಬೆಲೆಯ ಮಟ್ಟ ಕುಸಿದರೆ ರೈತರು ಬೆಳೆಗಳನ್ನು ಬೆಳೆಯಲು ನಿರುತ್ಸಾಹಿಗಳಾಗುವರು ಎಂಬುದನ್ನೂ ಮನಗಂಡಿದ್ದರು. ನಮ್ಮ ದೇಶದಲ್ಲಿ ಸಣ್ಣ ರೈತರ ಸಂಖ್ಯೆ ಅತ್ಯಧಿಕವಾಗಿದ್ದು, ಅವರುಗಳಿಗೆ ಸಾಲ ಯೋಜನೆಯನ್ನು ಜಾರಿಗೆತಂದರು.

ಶತಮಾನಗಳಿಂದಲೂ ಎಲ್ಲಾ ಕಾಲದಲ್ಲೂ ಅವಕಾಶ ವಂಚಿತ ಜನರೆಂದರೆ ಅವರು ದಲಿತರು ಮಾತ್ರ. ಇದನ್ನು ಮನಗಂಡಿದ್ದ ಜಗಜೀವನರಾಮ್ ಅವರು ಮಧ್ಯಪ್ರದೇಶದಲ್ಲಿ ನಡೆದ ಹರಿಜನ ಸಮ್ಮೇಳನದಲ್ಲಿ "ಸಾಗುವಳಿ ಮಾಡದ ಜಮೀನುಗಳನ್ನು ಹರಿಜನರು ಸ್ವಾಧೀನಪಡಿಸಿಕೊಳ್ಳ ಬಹುದು" ಎಂಬ ಘೋಷಣೆ ಹೊರಡಿಸಿದರು. ಈ ಘೋಷಣೆಗೆ ಹಲವಾರು ಭಿನ್ನಾಭಿಪ್ರಾಯಗಳೇ ಬಂದವು. ಇದನ್ನು ಕೇಳಿದ ಸವರ್ಣೀಯರು ಇವರ ಆಹ್ವಾನವನ್ನು ಪರಮಾರ್ಶಿಸತೊಡಗಿದರು. ಕೆಲವು ಮಂತ್ರಿಗಳ ಹೇಳಿಕೆ ಪ್ರಕಾರ ಪ್ರಸ್ತುತ ಇವರು ಭೂ ಆಕ್ರಮಣದ ಬಗ್ಗೆ ಮಾತನಾಡಿರುವವರು. ಮುಂದೊಂದು ದಿನ ಸ್ವತಂತ್ರ ಹರಿಜನ ರಾಷ್ಟ್ರಕ್ಕೂ ಕರೆ ನೀಡಬಹುದು ಎಂದು ಹೇಳುತ್ತಿದ್ದರು. ಸಮಾಜವಾದಿಗಳು ಜಗಜೀವನರಾಮ್ ಜನರಲ್ಲಿ ಜಾತಿ ಸಂಘರ್ಷ ಮತ್ತು ವರ್ಗ ಸಂಘರ್ಷವನ್ನು ಬಿತ್ತುತ್ತಿದ್ದಾರೆ ಎಂದು ಬೊಬ್ಬೆ ಹೊಡೆದರು. ಇವರ ಮಾತಿನ ಅರ್ಥ'ಯಾರು ಉಳುವುದಿಲ್ಲವೋ ಅವರಿಗೆ ಜಮೀನು ಇಟ್ಟುಕೊಳ್ಳುವ ಯಾವುದೇ ಅಧಿಕಾರವಿಲ್ಲ, ಉಳುವವನೇ ಭೂಮಿ ಒಡೆಯನಾಗಬೇಕು' ಎಂದು ಹೇಳಿದರು.

**ಭೂ ಸುಧಾರಣೆ ಮತ್ತು ಜಗಜೀವನರಾಮ್**

ಉಳುವವನೇ ಭೂಮಿ ಒಡೆಯ ಎಂಬ ವಿಚಾರದಲ್ಲಿ ಅಚಲ ನಂಬಿಕೆಯುಳ್ಳವರಾಗಿದ್ದರು. ಇದರಿಂದ ಭೂವಂಚಿತ ಸಮುದಾಯವು ಭೂಮಿಯನ್ನು ಪಡೆಯಲು ಸಾಧ್ಯ ಎಂಬುದು ಜಗಜೀವನರಾಮ್ ಅವರಿಗೆ ತಿಳಿದಿದ್ದಿತು. ಬೇರೆಯವರ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದ ಉಳುಮೆದಾರ ರೈತರಿಗೆ ಭೂಮಿಯ ಮಾಲಿಕತ್ವ ನೀಡಲು ವಾರ್ಷಿಕ ಯೋಜನೆಗಳಲ್ಲಿ ಭೂ ಸುಧಾರಣಾ ಯೋಜನೆಗಳನ್ನು ಅಳವಡಿಸಿ, ಅವುಗಳನ್ನು ನಿಷ್ಠೆಯಿಂದ ಅಳವಡಿಸಲು ರಾಜ್ಯ ಸರಕಾರಗಳಿಗೆ ಸೂಚಿಸಲಾಯಿತು. ಇದರ ಜೊತೆಗೆ;

1. ಬಿಹಾರದ ಗುಡ್ಡಗಾಡು ಪ್ರದೇಶದ ಪರಿಶಿಷ್ಟ ವರ್ಗದ ಜನರಿಗೆ ಭೂಮಿ ನೀಡಲು ಬಿಹಾರದ ಪರಿಶಿಷ್ಟ ಪ್ರದೇಶಗಳ ಕಾಯಿದೆಯನ್ನು ಜಾರಿಗೊಳಿಸಲಾಯಿತು.
2. ಗುಜರಾತ್ ರಾಜ್ಯದಲ್ಲಿ ಬಾಂಬೆ ಇನಾಮ್ಸ್ ಕಾಯಿದೆ 1958 ಮತ್ತು ಬಾಂಬೆ ತಲುಗ್‌ದಾರಿ ಟೆನ್ಯೂರ್ ರದ್ಧತಿ ಕಾಯಿದೆ 1949 ಇವುಗಳಿಗೆ ತಿದ್ದುಪಡಿ ತಂದು ಭೂಮಿ ಉಳುಮೆದಾರರಿಗೆ ಮಧ್ಯವರ್ತಿಗಳಿಂದ ಭೂ ಮಾಲಿಕತ್ವ ಪಡೆದುಕೊಳ್ಳಲು ಇನ್ನೊಂದು ಅವಕಾಶ ನೀಡಲಾಯಿತು.
3. ಕೇರಳ ರಾಜ್ಯದಲ್ಲಿ ಸ್ಟೇಆಫ್ ಎವಿಷನ್ ಪ್ರೊಸಿಡಿಂಗ್ಸ್ ಕಾಯಿದೆ 1969ಅನ್ನು ಜಾರಿಗೆತಂದು ಉಳುಮೆದಾರರಿಗೆ ರಕ್ಷಣೆ ನೀಡಲಾಯಿತು.
4. ತಮಿಳುನಾಡು ರಾಜ್ಯದಲ್ಲಿ 'ಗೂಡಲೂರು ಜಾಮನ್ ಎಸ್ಟೇಟುಗಳು ಕಾಯಿದೆ' 1968ನ್ನು ಜಾರಿಮಾಡಿ ಗುಡಲೂರು ತಾಲೂಕಿನ ಮಧ್ಯವರ್ತಿಗಳ ರದ್ಧತಿ ಮಾಡಲಾಯಿತು.
5. ಮಹಾರಾಷ್ಟ್ರ ರಾಜ್ಯದಲ್ಲಿ ರಾಜ್ಯ ಸರ್ಕಾರವು ಭೂ ಸುಧಾರಣಾ ಸಮಿತಿಯನ್ನು ರಚಿಸಿ ಸುಧಾರಣಾ ಕ್ಷೇತ್ರದಲ್ಲಿ ಉಂಟಾಗಿರುವ ಕೆಲಸ ಕಾರ್ಯಗಳ ಪ್ರಗತಿಯನ್ನು ಮೌಲ್ಯಮಾಪನ ಮಾಡಲು ಕ್ರಮ ಕೈಗೊಳ್ಳಲಾಯಿತು.

**ಜೀತ ಪದ್ಧತಿಯ ನಿರ್ಮೂಲನೆ**

ಜಗಜೀವನರಾಮ್ ಅವರು ಗ್ರಾಮೀಣ ಭಾರತದ ಸಾಮಾಜಿಕ ಮತ್ತು ಕೃಷಿ ಬದುಕಿನತ್ತ ದೃಷ್ಟಿ ಹಾಯಿಸಿದರು. ಈ ಸಂದರ್ಭದಲ್ಲಿ "ಹಳ್ಳಿಯಲ್ಲಿರುವವರೆಲ್ಲ ರೈತರೆಂದಾಗಲೀ, ರೈತರೆಲ್ಲ ಭೂಮಾಲೀಕರೆಂದಾಗಲೀ ಭಾವಿಸುವುದು ಸತ್ಯಕ್ಕೆ ದೂರವಾದ ಮಾತು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಬಹುಸಂಖ್ಯಾತ ಕೃಷಿ ಕಾರ್ಮಿಕರು ಭೂಹೀನರಾಗಿದ್ದು, ಅವರಲ್ಲಿ ಶೇ.90 ಪರಿಶಿಷ್ಟಜಾತಿ

ಮತ್ತು ಪಂಗಡದವರೇ ಆಗಿರುತ್ತಾರೆ. ಕೃಷಿಯಲ್ಲಿ ವರಮಾನ ಕಡಿಮೆ ಮತ್ತು ಮೂರನೇ ಒಂದು ಭಾಗದ ಜನರು ನಿರುದ್ಯೋಗಿಗಳಾಗಿರುತ್ತಾರೆ. ಗ್ರಾಮೀಣ ಭಾರತದ ಅತಿ ದೊಡ್ಡ ಕಳಂಕವೆಂದರೆ ಅದು ಜೀತಗಾರಿಕೆ ಪದ್ಧತಿ. ಇದನ್ನು ಕುರಿತು ಸರ್ಕಾರ ಜೀತ ವಿಮೋಚನೆಗಾಗಿ ಆಯೋಜಿಸಿರುವ ಕಾರ್ಯಕ್ರಮಗಳು ಕೇವಲ ಪ್ರಚಾರ ವಿಷಯಗಳಾಗಿವೆ" ಹಾಗಾಗಿ ಜೀತ ನಿರ್ಮೂಲನೆಗೆ ಸರ್ಕಾರ ಮತ್ತು ಸಾರ್ವಜನಿಕರ ಬೆಂಬಲ ಅಗತ್ಯವೆಂದು ಭಾವಿಸಿದರು.

ಈ ನಿಟ್ಟಿನಲ್ಲಿ 1969ರಲ್ಲಿ ಅಖಿಲ ಭಾರತ 73ನೇ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ (73)ರಲ್ಲಿ ಮಾತನಾಡುತ್ತಾ "ನಮ್ಮ ಎಲ್ಲಾ ಭೂ ಸುಧಾರಣೆಗಳು ಕೃಷಿ ಹಾಗೂ ಗ್ರಾಮೀಣ ಆರ್ಥಿಕತೆಯನ್ನು ಆಧರಿಸಿ ಪ್ರಾರಂಭವಾಗಬೇಕು. ಭೂ ಸುಧಾರಣೆ ನಮ್ಮ ಆದ್ಯ ಕರ್ತವ್ಯವಾಗಿರಬೇಕು. ಭೂ ಒಡೆತನದ ಮಿತಿಯನ್ನು ಜಾರಿಗೊಳಿಸಿ ಹೆಚ್ಚುವರಿ ಸಿಗುವ ಖಾಸಗಿ ಹಾಗೂ ಸರ್ಕಾರಿ ಭೂಮಿಯನ್ನು ಭೂರಹಿತ ಕೃಷಿ ಕಾರ್ಮಿಕರಿಗೆ ಹಂಚಬೇಕು ಎನ್ನುವ ಮಹತ್ವಾಕಾಂಕ್ಷೆಯನ್ನು ವ್ಯಕ್ತಪಡಿಸುತ್ತಾರೆ. ಗ್ರಾಮೀಣ ಬದುಕನ್ನು ಹಸನುಗೊಳಿಸಲು ಸಹಕಾರಿ ಕೃಷಿ ಹಾಗೂ ಸೇವಾ ಕೇಂದ್ರಗಳನ್ನು ಪ್ರಾರಂಭಿಸಿ ರೈತರಿಗೆ ಉತ್ತಮ ಗುಣಮಟ್ಟದ ಬೀಜ, ರಾಸಾಯನಿಕ ಗೊಬ್ಬರ ಮೊದಲಾದವುಗಳನ್ನು ಒದಗಿಸಿ ಹಾಗೂ ಮಾರಾಟದ ವ್ಯವಸ್ಥೆಯನ್ನು ಮಾಡುವ ಅಗತ್ಯವಿದೆ ಎಂದು ಒತ್ತಿ ಹೇಳಿದ ಅವರು ಗ್ರಾಮೀಣ ಜನರ ಜೀವನದ ಅಭಿವೃದ್ಧಿಗೆ ಕೃಷಿಯೊಂದಿಗೆ ಹೈನುಗಾರಿಕೆ ಹಾಗೂ ಮೀನುಗಾರಿಕೆಯಂತಹ ಉಪಕಸುಬುಗಳನ್ನು ಬೆಂಬಲಿಸಲು ಯೋಜನೆಗಳನ್ನು ರೂಪಿಸುವ ಅಗತ್ಯತೆ"ಯನ್ನು ಪ್ರಸ್ತಾಪಿಸುತ್ತಾರೆ.

**ದೇಶ ರಕ್ಷಣೆಯಲ್ಲಿ ಪರಿಶಿಷ್ಟರ ಸೇವೆ (1970–74)**

ಹಲವಾರು ಇಲಾಖೆಗಳನ್ನು ದಕ್ಷವಾಗಿ ಸಮರ್ಥವಾಗಿ ಮುನ್ನಡೆಸಿ, ನ್ಯಾಯ ಒದಗಿಸಿದ್ದ ಬಾಬೂ ಜಗಜೀವನರಾಮ್ ಅವರನ್ನು 1970ರಲ್ಲಿ ರಕ್ಷಣಾ ಸಚಿವರನ್ನಾಗಿ ನೇಮಿಸಲಾಯಿತು. ಭಾರತದಲ್ಲಿ ಗಡಿಯಲ್ಲಿ ಭಾರತೀಯ ಸೈನಿಕರು ಎದುರಿಸುತ್ತಿದ್ದ ಸಮಸ್ಯೆಯನ್ನು ಖುದ್ದು ಭೇಟಿಮಾಡಿ ತಿಳಿದರು. ಇದರ ಜೊತೆಗೆ ಪೂರ್ವ ಮತ್ತು ಪಶ್ಚಿಮ ಎರಡು ಕಡೆಯಿಂದಲೂ ಪಾಕಿಸ್ತಾನ ಗಡಿ ತಂಟೆಗೆ ಬಂದು ಯುದ್ಧಕ್ಕೆ ಸನ್ನದ್ಧವಾಗಿತ್ತು. 1971 ಮಾರ್ಚ್ 25ರಂದು ಪಾಕಿಸ್ತಾನ ಪಡೆಗಳು ಹಠಾತ್ ದಾಳಿ ನಡೆಸಿದವು. ಜಗಜೀವನರಾಮ್ ಗಡಿಯಲ್ಲಿ ಸನ್ನದ್ಧರಾಗಿರುವಂತೆ ಜವಾನರಿಗೆ ಹೇಳಿದರಲ್ಲದೆ ಅವರಿಗೆ ಎಲ್ಲಾ ರೀತಿಯ ಸಹಾಯದ ಅಭಯ ನೀಡಿದರು. ಸಮರೋಪಾದಿಯಲ್ಲಿ ಪುನರ್‌ವಸತಿ ಕಾರ್ಯಗಳು ಏರ್ಪಟ್ಟವು. ಪೂರ್ವ ಪಾಕಿಸ್ತಾನದಿಂದ (ಈಗಿನ ಬಾಂಗ್ಲದೇಶ)ಭಾರತಕ್ಕೆ ಆಗಮಿಸಿದ ನಿರಾಶ್ರಿತರಿಗೆ ಅನ್ನ, ಬಟ್ಟೆ ನೀಡುವುದಲ್ಲದೆ ವಸತಿ ಸೌಲಭ್ಯ ಕಲ್ಪಿಸುವುದು ಅವಶ್ಯವೆನಿಸಿತು ಮತ್ತು ಇವರಿಗೆ ವೈದ್ಯಕೀಯ ನೆರವು ನೀಡಲಾಯಿತು.

ಭಾರತದ ರಕ್ಷಣಾ ವ್ಯವಸ್ಥೆಯಲ್ಲಿ ಕೆಲವೇ ವರ್ಗದ ಜನರಿಗೆ ಮಾತ್ರ ಅವಕಾಶ ಒದಗಿಸಲಾಗುತ್ತಿತ್ತು. ಇವರು ರಕ್ಷಣಾ ಇಲಾಖೆಯಲ್ಲಿ ಕೆಲವು ಮಾರ್ಪಾಡುಗಳನ್ನು ತರಲು ಬಯಸಿದರು. ಜಗಜೀವನರಾಮ್ ಅವರು "ಯಾವುದೇ ವ್ಯಕ್ತಿ ಸೈನ್ಯಕ್ಕೆ ಜಾತಿಯ ಆಧಾರದ ಮೇಲೆ ಅನರ್ಹ ಎಂದು ಪರಿಗಣಿಸಲಾಗುವುದಿಲ್ಲ. ಆತ ಯಾವುದೇ ಜಾತಿ ಮತ್ತು ಧರ್ಮದವನಾಗಿರಲೀ, ಆತನ ದೈಹಿಕ ಸದೃಢತೆಯ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು ಎಂದು ಘೋಷಿಸಿದರು". ಈ ಒಂದು ಘೋಷಣೆಯೇ ಪ್ರಸ್ತುತದಲ್ಲಿ ದಲಿತರು ಸೇನೆಯನ್ನು ಸೇರಲು ಅವಕಾಶವನ್ನು ಒದಗಿಸಿದಂತಾಯಿತು. ತಲತಲಾಂತರದಿಂದ ಬಂದ ಜಾತಿಪದ್ಧತಿ, ಹಳೆ ಸಂಪ್ರದಾಯಗಳನ್ನು ಕಿತ್ತೆಸೆದು ಕ್ಷತ್ರಿಯ ವಿಶೇಷ ಸವಲತ್ತಿನ ವ್ಯವಸ್ಥೆಯನ್ನು ತೊಡೆದು ಹಾಕಿ, ಸಮಾಜದ ಎಲ್ಲಾ ವರ್ಗದವರಿಗೆ ಸೈನ್ಯದ ಬಾಗಿಲನ್ನು ಮುಕ್ತವಾಗಿ ತೆರೆದರು.

**ಸಮಾರೋಪ**

ಹೀಗೆ ಜಗಜೀವನರಾಮ್‌ರವರು ರಾಜಕೀಯ ಜೀವನಕ್ಕೂ ಮೊದಲು ಮತ್ತು ರಾಜಕೀಯ ಜೀವನದಲ್ಲಿ ದಲಿತರ ಹಿತಾಸಕ್ತಿಗೆ ದುಡಿದುದನ್ನು ಮನಗಾಣಬಹುದು. ಇಲಾಖೆ ಯಾವುದೇ ಇರಲಿ, ಅದರಲ್ಲಿ ದಲಿತರ ಪ್ರಾತಿನಿಧ್ಯ ಎಷ್ಟೆಂಬುದನ್ನು ನೋಡುತ್ತಿದ್ದರು. ಅದರಲ್ಲಿ ಅಗತ್ಯ ಸವಲತ್ತುಗಳನ್ನು ಸೌಲಭ್ಯ ವಂಚಿತರಿಗೆ ನೀಡುತ್ತಿದ್ದರು. ಸ್ವಾತಂತ್ರ್ಯ ನಂತರ ಭಾರತದಲ್ಲಿ ದಲಿತರ ಒಳಗೊಳ್ಳುವಿಕೆ ಕಾರ್ಯಗಳು ಅತಿ ಜರೂರಾಗಿ ನಡೆದವು. ಇವು ಜಗಜೀವನರಾಮ್‌ರವರು ತಮ್ಮ ದೂರದೃಷ್ಟಿಯಿಂದ ಅಭ್ಯಾಸಿಸುತ್ತಿದ್ದ ಫಲವಾಗಿದೆ. ರಕ್ಷಣಾ ಸಚಿವರಾಗಿ ನೇಮಕವಾದ ಕೂಡಲೇ ಜನರು ಸೈನ್ಯಕ್ಕೆ ಅಸ್ಪೃಶ್ಯರನ್ನು ನೇಮಕ ಮಾಡುತ್ತಾರೆಯೇ ಎಂಬ ಪ್ರಶ್ನೆಗಳು ಎದ್ದಿದ್ದವು. ಅವರ ಪ್ರಶ್ನೆಗಳಿಗೆ ತಮ್ಮ ಕಾರ್ಯಗಳಿಂದಲೇ ಉತ್ತರಿಸಿದುದು ಜಗಜೀವನರಾಮ್ ಅವರ ಪ್ರತಿಭಾವಂತಿಕೆಯ ಲಕ್ಷಣವಾಗಿತ್ತು. ಸ್ವಾತಂತ್ರ್ಯ ಪೂರ್ವ ಮತ್ತು ನಂತರದಲ್ಲಿ ರಾಷ್ಟ್ರ ಮತ್ತು ದಲಿತರಿಗೆ ಹಾಗೂ ಸಮಸ್ತ ಜನತೆಗೂ ಹಲವಾರು ಕೊಡುಗೆಗಳನ್ನು ನೀಡಿದ್ದಾರೆ. ಅಂಬೇಡ್ಕರ್ ನಂತರದ ಭಾರತದಲ್ಲಿ ದಲಿತ ಚಳವಳಿಗೆ ಕೊಡುಗೆ ನೀಡಿದವರಲ್ಲಿ ಬಾಬೂಜಿ ಪ್ರಮುಖರು. ಅಂಬೇಡ್ಕರ್‌ರವರ ಆಶಯವಾದ ದಲಿತರ ರಾಜಕೀಯ ನಾಯಕತ್ವವನ್ನು ಪೂರೈಸಿದರು. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಕಾಲದಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದ ಮಹಾನ್ ನಾಯಕ ಜಗಜೀವನ್‌ರಾಮ್ ಅವರನ್ನು ಯಾರೂ ಕೂಡ ಮರೆಯಲಾಗದು.

**ಪರಾಮರ್ಶನ ಗ್ರಂಥಗಳು**


- ವೈಶಾಲಿ. (2019). ಡಾ.ಬಾಬೂ ಜಗಜೀವನ್ ರಾಮ್ ಸಂಸದರಾಗಿ ಮತ್ತು ಸಚಿವರಾಗಿ: ಒಂದು ಅಧ್ಯಯನ.
- Anil Kumar Sinha. (2005). *Jagjivan Ram- The enlightened Spirit.* Aniket Seva.
- Bakshi S.R. (1992). *Jagjivanram: The Harijan Leader.* Anmol Publication.
- Chanchreek K.L.(2006). *Babu Jagjivan Ram: A Nation Builder, vol-I*, Shree Publishers.
- Dasari S. (1990). *Socio-Political Background of Babu Jagjivan Ram,* Ambedkar Fraternity Printing Publication Service.